ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–560 018. ದೂರವಾಣಿ: 080–26701303

## ೨೮.೦೨.೨೦೧೨ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ ೩ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಿಕ್ಷಣ ಪರಿಷತ್ತಿನ ೩ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಫೆಬ್ರವರಿ ೨೮, ೨೦೧೨ರ ಮಂಗಳವಾರದಂದು ಮಧ್ಯಾಹ್ನ ೦೨.೩೦ ಗಂಟೆಗೆ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | | |
|---|---|---|
| ೧. | **ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ,** ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. | **ವಿದ್ವಾನ್ ಸಿ. ನಂಜುಂಡಯ್ಯ,** ಆದಿಚುಂಚನಗಿರಿ | ಸದಸ್ಯರು |
| ೩. | **ವಿದ್ವಾನ್ ಡಿ.ಎಸ್. ಚಂದ್ರಶೇಖರಯ್ಯ,** ತುಮಕೂರು | ಸದಸ್ಯರು |
| ೪. | **ಡಾ. ಎಚ್.ಕೆ. ಸುರೇಶ್ ಆಚಾರ್ಯ,** ಉಡುಪಿ | ಸದಸ್ಯರು |
| ೫. | **ವಿದ್ವಾನ್ ವಿಶ್ವೇಶ್ವರ ಗೋಪಾಲ ಹೆಗಡೆ,** ಹೊನ್ನಾವರ | ಸದಸ್ಯರು |
| ೬. | **ಡಾ. ಶ್ರೀನಿವಾಸ ವರಖೇಡಿ,** ಡೀನ್, ಭಾಷಾ ನಿಕಾಯ | ಸದಸ್ಯರು |
| ೭. | **ಪ್ರೊ. ವೈ.ಎಸ್. ಸಿದ್ದೇಗೌಡ,** ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | | |
|---|---|---|
| ೧. | **ಸರ್ಕಾರದ ಉಪ ಕಾರ್ಯದರ್ಶಿ,** ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೨. | **ಸರ್ಕಾರದ ಉಪ ಕಾರ್ಯದರ್ಶಿ,** ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೩. | **ಸರ್ಕಾರದ ಕಾರ್ಯದರ್ಶಿ,** ಧಾರ್ಮಿಕ ದತ್ತಿ ಇಲಾಖೆ, ಬೆಂಗಳೂರು | ಸದಸ್ಯರು |
| ೪. | **ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |
| ೫. | **ಆಯುಕ್ತರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೬. | **ವಿದ್ವಾನ್ ಎ. ಹರಿದಾಸ ಭಟ್ಟ,** ಬೆಂಗಳೂರು | ಸದಸ್ಯರು |

ಸಭೆಯು ಉನ್ನತ ಶಿಕ್ಷಣ ಸಚಿವರಾಗಿದ್ದ ಡಾ. ವಿ.ಎಸ್. ಆಚಾರ್ಯ ಅವರ ನಿಧನಕ್ಕೆ ಸಂತಾಪ ಸೂಚಿಸಿ ಎರಡು ನಿಮಿಷಗಳ ಮೌನವನ್ನು ಆಚರಿಸಿತು. ಅನಂತರ ಮಾನ್ಯ ಕುಲಪತಿಗಳು ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

### ವಿಷಯ 1: ದಿನಾಂಕ 07.01.2012ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ ಎರಡನೇ ಸಭೆಯ ಅನುಪಾಲನಾ ವರದಿ.

ಟಿಪ್ಪಣಿ: ದಿನಾಂಕ: 07.01.2012ರಂದು ನಡೆದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಿಕ್ಷಣ ಪರಿಷತ್ತಿನ ಎರಡನೇ ಸಭೆಯಲ್ಲಿ ಚರ್ಚಿತವಾದ **ವಿಷಯ ಸಂಖ್ಯೆ 1**ರಂತೆ **'**ಸಂಸ್ಕೃತ ಪುಸ್ತಕ ಪುರಸ್ಕಾರ ಯೋಜನೆ–2010**'**ರ ಉಪಸಮಿತಿಯು ಸಭೆ ಸೇರಿ ಏಳು ಪುಸ್ತಕಗಳನ್ನು ಆಯ್ಕೆ ಮಾಡಲಾಗಿದೆ. **ವಿಷಯ ಸಂಖ್ಯೆ 4 ಮತ್ತು 5ಕ್ಕೆ** ಸಂಬಂಧಿಸಿದಂತೆ ವಿದ್ವನ್ಮಧ್ಯಮಾ ಶಾಸ್ತ್ರ ಹಾಗೂ ವೇದ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಕ್ರಮವಹಿಸಲಾಗಿದೆ. ವಿಷಯ ಸಂಖ್ಯೆ 7ಕ್ಕೆ ಸಂಬಂಧಿಸಿದಂತೆ ಪಾಠಶಾಲೆಗಳಲ್ಲಿನ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ವಿದ್ಯಾರ್ಹತೆಯನ್ನು ನಿಗದಿಪಡಿಸಿದ್ದು, ಈ ಕುರಿತು ಮುಂದಿನ ಕ್ರಮವಿಡಲಾಗಿದೆ.

ನಿರ್ಣಯ: **ಸಭೆಯು ಅನುಪಾಲನ ವರದಿಯನ್ನು ಪರಿಶೀಲಿಸಿ ಒಪ್ಪಿಗೆ ನೀಡಿತು.**

### ವಿಷಯ 2: ವೃಂದ ಮತ್ತು ನೇಮಕಾತಿ ಪರಿನಿಯಮ ಅನುಮೋದನೆ ಬಗೆಗೆ.

ಟಿಪ್ಪಣಿ: ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಇಡಿ 91 ಯುಆರ್‌ಸಿ 2010, ದಿನಾಂಕ: 25.01.2011ರಂದು ಒಟ್ಟು 133 ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಸೃಜಿಸಿ ಆದೇಶಿಸಿದೆ. ಅದರಂತೆ ಯುಜಿಸಿ ಹಾಗೂ ರಾಜ್ಯ ಸರ್ಕಾರದ ನೇಮಕಾತಿ ನಿಯಮಗಳನ್ನು ಪರಿಶೀಲಿಸಿ ವಿಶ್ವವಿದ್ಯಾಲಯಕ್ಕೆ ಅನ್ವಯವಾಗುವ ಕೆಲವು ನಿಯಮಗಳನ್ನು ಸೇರ್ಪಡೆ ಮಾಡಿ ದಿನಾಂಕ: **17.06.2011**ರಂದು ಪ್ರಶಾಸನ ಸಮಿತಿ ಹಾಗೂ ಪ್ರಶಿಕ್ಷಣ ಪರಿಷತ್ತಿನ ಘಟನೋತ್ತರ ಅನುಮೋದನೆಯನ್ನು ನಿರೀಕ್ಷಿಸಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸಿದ್ಧಪಡಿಸಿ ಕಳುಹಿಸಲಾಗಿತ್ತು. ಈ ಪರಿನಿಯಮವು ಹಣಕಾಸು ಇಲಾಖೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಮತ್ತು ಶಿಕ್ಷಣ ಇಲಾಖೆಯ ಅನುಮೋದನೆಯನ್ನು ಪಡೆದು ಅಂಕಿತಕ್ಕಾಗಿ ರಾಜ್ಯಪಾಲರ ಕಾರ್ಯಾಲಯಕ್ಕೆ ಕಳುಹಿಸಿತ್ತು. ದಿನಾಂಕ: 16.02.2012ರಂದು ಉನ್ನತ ಶಿಕ್ಷಣ ಇಲಾಖೆಯು ಪತ್ರ ಬರೆದು ಹಣಕಾಸು ಸಮಿತಿ, ಪ್ರಶಿಕ್ಷಣ ಪರಿಷತ್ತು ಮತ್ತು ಪ್ರಶಾಸನ ಸಮಿತಿಯಲ್ಲಿ ಅನುಮೋದನೆ ಪಡೆದು ಕಳುಹಿಸಲು ಈಗ ಸೂಚಿಸಿದೆ. ಈ ಹಿನ್ನೆಲೆಯಲ್ಲಿ ನೇಮಕಾತಿ ಪರಿನಿಯಮವನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ವೃಂದ ಮತ್ತು ನೇಮಕಾತಿ ನಿಯಮವನ್ನು ಪರಿಶೀಲಿಸಿತು. ಈ ಪರಿನಿಯಮವು ಈಗಾಗಲೇ ಆರ್ಥಿಕ ಇಲಾಖೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ಪರಿಶೀಲಿಸಿರುವ ಹಿನ್ನೆಲೆಯಲ್ಲಿಯೂ 'ಡಿ' ಗ್ರೂಪ್ ಮತ್ತು ಇತರೆ ಕೆಲವು ತಾಂತ್ರಿಕ ಬೋಧಕ ಹುದ್ದೆಗಳಿಗೆ ಸಂಸ್ಕೃತಜ್ಞಾನದಿಂದ ಹೊರತುಪಡಿಸಿರುವುದನ್ನು ಸಭೆಯು ಪರಿಶೀಲಿಸಿತು. ಉಳಿದ ಎಲ್ಲಾ ಬೋಧಕ–ಬೋಧಕೇತರ ಹುದ್ದೆಗಳಿಗೆ ಸಂಸ್ಕೃತ ವಿದ್ಯಾರ್ಹತೆಯನ್ನು ನಿಗದಿಪಡಿಸಿರುವುದಕ್ಕೆ ಸಭೆಯು ಒಪ್ಪಿಗೆಯನ್ನು ನೀಡಿತು.**

**ವಿಷಯ 3: ಪಿಎಚ್.ಡಿ. (ವಿದ್ಯಾವಾರಿಧಿ) ನಿಯಮಾವಳಿಯ ಅನುಮೋದನೆ ಬಗೆಗೆ.**

ಟಿಪ್ಪಣಿ: ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ದಿನಾಂಕ: 03.06.2011ರಂದು ಪಿಎಚ್.ಡಿ. ಪದವಿ ವ್ಯಾಸಂಗಕ್ಕೆ ಸಂಬಂಧಿಸಿದಂತೆ ಏಕರೂಪದ ಕ್ರಮನಿಯಮಾವಳಿಯನ್ನು ಹೊರಡಿಸಿದೆ. ಈ ನಿಯಮಾವಳಿಯು ದಿನಾಂಕ: 12.04.2011ರಂದು ಜರುಗಿದ ಉನ್ನತ ಶಿಕ್ಷಣ ಪರಿಷತ್ತಿನಲ್ಲಿ ಅನುಮೋದನೆಯನ್ನು ಪಡೆದಿದೆ. ಈ ಏಕರೂಪದ ನಿಯಮಾವಳಿಯನ್ನು ಆಯಾಯ ವಿಶ್ವವಿದ್ಯಾಲಯಗಳಲ್ಲಿ ಜಾರಿಗೆ ತರಲು ಅಗತ್ಯ ಕ್ರಮಕೈಗೊಳ್ಳಬೇಕೆಂದು ಪತ್ರದಲ್ಲಿ ಸೂಚಿಸಲಾಗಿದೆ. ಈ ಹಿನ್ನೆಲೆಯಲ್ಲಿ ದಿನಾಂಕ: 09.02.2012ರಂದು ಸಭೆ ಸೇರಿ ಉನ್ನತ ಶಿಕ್ಷಣ ಪರಿಷತ್ತಿನ ಪಿಎಚ್.ಡಿ. ಪದವಿ ವ್ಯಾಸಂಗದ ಏಕರೂಪದ ಕ್ರಮನಿಯಮಾವಳಿಗೆ ಅನುಸಾರವಾಗಿ **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪಿಎಚ್.ಡಿ. ಪರಿನಿಯಮವನ್ನು** ಸಿದ್ಧಪಡಿಸಿದೆ. ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಉನ್ನತ ಶಿಕ್ಷಣ ಪರಿಷತ್ತು ಹೊರಡಿಸಿರುವ ಪಿಎಚ್.ಡಿ. ನಿಯಮಾವಳಿ ಮತ್ತು ಇದನ್ನು ಅನುಸರಿಸಿ ೦೯.೦೨.೨೦೧೨ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಉಪಸಮಿತಿ ಸಭೆಯಲ್ಲಿ ಪರಿಷ್ಕರಣ ಆಗಿರುವುದನ್ನು ಸಭೆಯು ಗಮನಿಸಿತು. ೨೦೧೨–೧೩ನೇ ಸಾಲಿನಿಂದ ಪಿಎಚ್.ಡಿ. (ವಿದ್ಯಾವಾರಿಧಿ)ಯನ್ನು ಜಾರಿಗೊಳಿಸಬಹುದೆಂದು ಸಭೆಯು ಸೂಚಿಸಿ ಅನುಮೋದಿಸಿತು.**

**ವಿಷಯ 4: ಎಂ.ಫಿಲ್. (ವಿಶಿಷ್ಟಾಚಾರ್ಯ) ನಿಯಮ ಅನುಮೋದನೆ ಬಗೆಗೆ.**

ಟಿಪ್ಪಣಿ: ದಿನಾಂಕ: 09.02.2012ರಂದು ಸಭೆ ಸೇರಿ ಎಂ.ಫಿಲ್. (ವಿಶಿಷ್ಟಾಚಾರ್ಯ) ನಿಯಮಾವಳಿಯನ್ನು ಇತರೆ ವಿಶ್ವವಿದ್ಯಾಲಯಗಳ ಹಾಗೂ ಉಳಿದ ರಾಜ್ಯಗಳಲ್ಲಿರುವ ಸಂಸ್ಕೃತ ವಿಶ್ವವಿದ್ಯಾಲಯಗಳ ನಿಯಮಾವಳಿಯನ್ನು ಪರಿಶೀಲಿಸಿ ನೂತನವಾಗಿ ನಿಯಮಾವಳಿಯನ್ನು ಸಿದ್ಧಪಡಿಸಿದೆ. ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

ನಿರ್ಣಯ: **ಸಭೆಯು ಎಂ.ಫಿಲ್ (ವಿಶಿಷ್ಟಾಚಾರ್ಯ) ಪರಿನಿಯಮವನ್ನು ಪರಿಶೀಲಿಸಿತು. ೨೦೧೨–೧೩ನೇ ಸಾಲಿನಿಂದ ಅರ್ಹ ಅಭ್ಯರ್ಥಿಗಳಿಗೆ ಎಂ.ಫಿಲ್ ಪದವಿ ಅಧ್ಯಯನಕ್ಕೆ ಅವಕಾಶ ನೀಡಬಹುದೆಂದೂ ಆದಷ್ಟು ಬೇಗ ಕ್ರಮವಹಿಸಬೇಕೆಂದೂ ಸೂಚಿಸಿ ಅನುಮೋದಿಸಿತು.**

**ವಿಷಯ 5: ಡಿ.ಲಿಟ್. (ವಿದ್ಯಾವಾಚಸ್ಪತಿ) ನಿಯಮ ಅನುಮೋದನೆ ಬಗೆಗೆ.**

ಟಿಪ್ಪಣಿ: ದಿನಾಂಕ: 09.02.2012ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಡಿ.ಲಿಟ್. (ವಿದ್ಯಾವಾಚಸ್ಪತಿ) ನಿಯಮಾವಳಿಯನ್ನು ಹೊಸದಾಗಿ ರೂಪಿಸಿದೆ. ಆದರೆ ಈಗಾಗಲೇ ರಾಜ್ಯಪಾಲರಿಂದ ಅಂಕಿತಗೊಂಡಿರುವ ತುಮಕೂರು ವಿಶ್ವವಿದ್ಯಾಲಯದ ನಿಯಮಾವಳಿಯನ್ನು ಪರಿಶೀಲಿಸಿ ಅದರ ಚೌಕಟ್ಟಿನಲ್ಲಿಯೇ ಇರಿಸಲಾಗಿದೆ ಹಾಗೂ ನೂತನವಾಗಿ ವಿಶ್ವವಿದ್ಯಾಲಯಕ್ಕೆ ಹೊಂದುವಂತೆ ನಿಯಮಾವಳಿಯನ್ನು ಸಿದ್ಧಪಡಿಸಿದೆ. ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

ನಿರ್ಣಯ: **ಸಭೆಯು ಡಿ.ಲಿಟ್ (ವಿದ್ಯಾವಾಚಸ್ಪತಿ) ಪರಿನಿಯಮವನ್ನು ಪರಿಶೀಲಿಸಿತು. ಭಾರತದ ಇತರೆ ಸಂಸ್ಕೃತ ವಿಶ್ವವಿದ್ಯಾಲಯಗಳಲ್ಲಿರುವ ಡಿ.ಲಿಟ್ ನಿಯಮಗಳ ಅನ್ವಯ ಮತ್ತು ಕರ್ನಾಟಕದ ವಿವಿಧ ವಿಶ್ವವಿದ್ಯಾಲಯದಲ್ಲಿರುವ ನಿಯಮಗಳನ್ನು ಅನ್ವಯಿಸಿ ರೂಪಿಸಿರುವ ಡಿ.ಲಿಟ್ ಪರಿನಿಯಮಕ್ಕೆ ಅನುಮೋದನೆಯನ್ನು ನೀಡಿತು. ಈ ಪರಿನಿಯಮವನ್ನು ಆದಷ್ಟು ಬೇಗ ಸರ್ಕಾರಕ್ಕೆ ಮುಂದಿನ ಕ್ರಮಕ್ಕಾಗಿ ಕಳುಹಿಸಬಹುದೆಂದು ಸೂಚಿಸಿತು.**

**ವಿಷಯ 6: ಶೋಧ ಸಂಸ್ಥೆಗಳ ಮಾನ್ಯತಾ ಪರಿನಿಯಮ ಅನುಮೋದನೆ ಬಗೆಗೆ.**

ಟಿಪ್ಪಣಿ: ಶೋಧ ಸಂಸ್ಥೆಗಳ ಮಾನ್ಯತಾ ಪರಿನಿಯಮಾವಳಿಯನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧಿನಿಯಮ ಮತ್ತು ಪರಿಷ್ಕೃತಗೊಳ್ಳುತ್ತಿರುವ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕರಡು ಪರಿನಿಯಮದ ಹಿನ್ನೆಲೆಯಲ್ಲಿ ಹಾಗೂ ಇತರೆ ವಿಶ್ವವಿದ್ಯಾಲಯಗಳ ಮಾನ್ಯತಾ ಪರಿನಿಯಮಾವಳಿಯನ್ನು ಗಮನಿಸಿ ಹೊಸದಾಗಿ ಸಿದ್ಧಪಡಿಸಲಾಗಿದೆ. ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

ನಿರ್ಣಯ: **ಸಭೆಯು ಶೋಧ ಸಂಸ್ಥೆಗಳ ಮಾನ್ಯತಾ ಪರಿನಿಯಮವನ್ನು ಪರಿಶೀಲಿಸಿ ಅನುಮೋದನೆ ನೀಡಿತು. ಈ ಪರಿನಿಯಮವನ್ನು ಸರ್ಕಾರದ ಅಂಕಿತಕ್ಕಾಗಿ ಕಳುಹಿಸಬಹುದೆಂದು ಅಭಿಪ್ರಾಯ ನೀಡಿತು.**

**ವಿಷಯ 7: 2011–12ನೇ ಸಾಲಿನ ಪ್ರಥಮಾ, ಕಾವ್ಯ ಮತ್ತು ಸಾಹಿತ್ಯ ಪರೀಕ್ಷೆಗಳ ಬಗೆಗೆ.**

ಟಿಪ್ಪಣಿ: ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಅಡಿಯಲ್ಲಿ ಬರುವ 314 ಪಾಠಶಾಲೆಗಳಲ್ಲಿ ಅಧ್ಯಯನ ಮಾಡುತ್ತಿರುವ **ಪ್ರಥಮಾ, ಕಾವ್ಯ ಮತ್ತು ಸಾಹಿತ್ಯ** ತರಗತಿಗಳ ಕೊನೆಯ ವರ್ಷದ ಪ್ರಸಿದ್ಧ ಪರೀಕ್ಷೆಗಳನ್ನು ರಾಜ್ಯಾದ್ಯಂತ ಸುಮಾರು 150 ಪರೀಕ್ಷಾ ಕೇಂದ್ರಗಳಲ್ಲಿ ದಿನಾಂಕ: 04.02.2012ರಿಂದ 07.02.2012ವರೆಗೆ ನಡೆಸಲಾಯಿತು.

| ಕ್ರಸಂ. | ತರಗತಿಗಳು | ಪರೀಕ್ಷಾ ಕೇಂದ್ರಗಳ ಸಂಖ್ಯೆ | ಪರೀಕ್ಷೆ ತೆಗೆದುಕೊಂಡ ವಿದ್ಯಾರ್ಥಿಗಳ ಸಂಖ್ಯೆ |
|---|---|---|---|
| 01 | ಪ್ರಥಮಾ | 150 | 11983 |
| 02 | ಕಾವ್ಯ | 150 | 4853 |
| 03 | ಸಾಹಿತ್ಯ | 40 | 987 |
| | **ಒಟ್ಟು** | | **17823** |

ನಾನಾ ಜಿಲ್ಲೆಗಳಲ್ಲಿ ನಡೆದ ಈ ಪರೀಕ್ಷೆಗಳು ಯಾವ ಹೆಚ್ಚಿನ ಅಡಚಣೆ ಇಲ್ಲದೇ ನಡೆದವು. ಕಾಲೇಜುಗಳ ಅಧ್ಯಾಪಕರನ್ನೊಳಗೊಂಡ ತ್ರಿಸದಸ್ಯ ವಿಚಕ್ಷಣಾದಳಗಳನ್ನು ಪರೀಕ್ಷೆಗಳ ತಪಾಸಣೆಗಾಗಿ ರಚಿಸಲಾಗಿತ್ತು. ಆದರೆ ಯಾವ ಗಂಭೀರ ಸಮಸ್ಯೆಗಳು ವರದಿಯಾಗಿಲ್ಲ.

ಪ್ರಸಕ್ತ ಪರೀಕ್ಷಾ ನಂತರದಲ್ಲಿ ಒಟ್ಟು 7 ಕೇಂದ್ರಗಳಲ್ಲಿ ಮೌಲ್ಯಮಾಪನವನ್ನು ನಡೆಸಲಾಗುತ್ತಿದ್ದು ಸುಮಾರು 7 ಮುಖ್ಯ ಪರೀಕ್ಷಕರ ಪರಿವೀಕ್ಷಣೆಯಲ್ಲಿ 196ಜನ ಮೌಲ್ಯಮಾಪಕರು ದಿನಾಂಕ: 24.02.2012ರಿಂದ ಮೌಲ್ಯಮಾಪನ ನಡೆಸಲಿದ್ದಾರೆ. ಸಾಹಿತ್ಯ ಪರೀಕ್ಷೆಯ ಪತ್ರಿಕೆಗಳ ಮೌಲ್ಯಮಾಪನವನ್ನು ವಿಶ್ವವಿದ್ಯಾಲಯದ ಕೇಂದ್ರವೊಂದರಲ್ಲೇ ನಡೆಸಲಾಗುತ್ತದೆ. ದಿನಾಂಕ: 10.04.2012ರ ಮೊದಲೇ ಫಲಿತಾಂಶವನ್ನು ಘೋಷಿಸುವ ವ್ಯವಸ್ಥೆಯನ್ನು ಮಾಡಿಕೊಳ್ಳಲಾಗಿದೆ.

ನಿರ್ಣಯ: **ಸಭೆಯು ಪ್ರಥಮಾ, ಕಾವ್ಯ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದಂತೆ ವ್ಯವಸ್ಥಿತವಾಗಿ ಪರೀಕ್ಷೆಗಳು ಮತ್ತು ಮೌಲ್ಯಮಾಪನ ನಡೆದಿರುವುದಕ್ಕೆ ಹರ್ಷವನ್ನು ವ್ಯಕ್ತಪಡಿಸಿ, ಅನುಮೋದಿಸಿತು.**

**ವಿಷಯ 8: 2011–12ನೇ ಸಾಲಿನ ವಿದ್ವನ್ಮಧ್ಯಮಾ (ಬಿ.ಎ.) ಮತ್ತು ವಿದ್ವದುತ್ತಮಾ (ಎಂ.ಎ.) ಪರೀಕ್ಷೆಗಳ ಬಗೆಗೆ.**

ಟಿಪ್ಪಣಿ: 2011–12ನೇ ಸಾಲಿನ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿದ್ವನ್ಮಧ್ಯಮಾ ಹಾಗೂ ವಿದ್ವದುತ್ತಮಾ ತರಗತಿಗಳ ಪರೀಕ್ಷಾ ಪ್ರಕ್ರಿಯೆಯು ಆರಂಭವಾಗಿದೆ. ಇಪ್ಪತ್ತೊಂದು ಪರೀಕ್ಷಾ ಕೇಂದ್ರಗಳಲ್ಲಿ ವಿಭಿನ್ನ ವಿಷಯಗಳಲ್ಲಿ ಪರೀಕ್ಷೆಗಳು ದಿನಾಂಕ: 12.03.2012ರಿಂದ ಪ್ರಾರಂಭವಾಗಿ ದಿನಾಂಕ: 28.03.2012ರಂದು ಮುಕ್ತಾಯಗೊಳ್ಳುತ್ತವೆ.

ವಿದ್ವನ್ಮಧ್ಯಮಾ ಪ್ರಥಮ ವರ್ಷದಲ್ಲಿ 48 ವಿಷಯಗಳ ಶಾಸ್ತ್ರಭಾಗವಿದ್ದು, ಎರಡು ಭಾಗ ವೇದ ವಿಭಾಗಕ್ಕೆ ಸಂಬಂಧಪಟ್ಟಿರುತ್ತದೆ. ವಿದ್ವನ್ಮಧ್ಯಮಾ ಮೂರನೇ ವರ್ಷದಲ್ಲಿ ಒಟ್ಟು 53 ವಿಷಯಗಳಿದ್ದು, ಶಾಸ್ತ್ರಭಾಗದಲ್ಲಿ 49 ಹಾಗೂ ಉಳಿದ 4 ಭಾಗಗಳು ವೇದ ವಿಭಾಗಕ್ಕೆ ಸಂಬಂಧಪಟ್ಟಿದ್ದಾಗಿರುತ್ತವೆ.

ವಿದ್ವದುತ್ತಮಾ ಪ್ರಥಮ ವರ್ಷದ ಪರೀಕ್ಷೆಗಳನ್ನು ವಿಶ್ವವಿದ್ಯಾಲಯವು ಹೊಸ ಪಠ್ಯಕ್ರಮದಂತೆ ನಡೆಸುತ್ತಿದ್ದು, ಶಾಸ್ತ್ರಭಾಗದಲ್ಲಿ ಒಟ್ಟು 49 ವಿಷಯಗಳು, ವೇದ ವಿಭಾಗದಲ್ಲಿ ಒಟ್ಟು 10 ವಿಷಯಗಳ ವರ್ಗೀಕರಣದಿಂದಾಗಿ ಒಟ್ಟು 59 ವಿಷಯಗಳಿರುತ್ತವೆ. ವಿದ್ವದುತ್ತಮಾ ದ್ವಿತೀಯ ವರ್ಷದ ಪರೀಕ್ಷೆಗಳನ್ನು ಹಳೆಯ ಪಠ್ಯಕ್ರಮದಂತೆ ನಡೆಸಲು ಉದ್ದೇಶಿಸಿದ್ದು, ವೇದ–ಶಾಸ್ತ್ರಭಾಗಗಳಲ್ಲಿ ಒಟ್ಟು 61 ವಿಷಯಗಳಿರುತ್ತವೆ.

ವಿದ್ವನ್ಮಧ್ಯಮಾ ಪ್ರಥಮ ಹಾಗೂ ಅಂತಿಮ ವರ್ಷದಲ್ಲಿ **ಒಟ್ಟು 800 ವಿದ್ಯಾರ್ಥಿಗಳು** ಮತ್ತು ವಿದ್ವದುತ್ತಮಾ ಪ್ರಥಮ ಹಾಗೂ ಅಂತಿಮ ವರ್ಷದಲ್ಲಿ **ಒಟ್ಟು 375 ವಿದ್ಯಾರ್ಥಿಗಳು** ಪರೀಕ್ಷೆಗೆ ಹಾಜರಾಗುತ್ತಿದ್ದಾರೆ.

ನಿರ್ಣಯ: **ಸಭೆಯು ವಿದ್ವನ್ಮಧ್ಯಮಾ (ಬಿ.ಎ.) ಮತ್ತು ವಿದ್ವದುತ್ತಮಾ (ಎಂ.ಎ.) ಪರೀಕ್ಷೆಗೆ ವಿವಿಧ ಶಾಸ್ತ್ರವಾರುಗಳಲ್ಲಿ ನಡೆದಿರುವ ಸಿದ್ಧತೆಗಳನ್ನು ಪರಿಶೀಲಿಸಿ ಒಪ್ಪಿಗೆ ಸೂಚಿಸಿತು.**

**ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು:**

**ವಿಷಯ 1: ವಿದ್ವನ್ಮಧ್ಯಮಾ ಮತ್ತು ವಿದ್ವದುತ್ತಮಾ ಅಂತಿಮ ವರ್ಷದ ಪರೀಕ್ಷೆಗಳಿಗೆ ಹೊರವಿದ್ಯಾರ್ಥಿಗಳು ಪ್ರವೇಶ ಪಡೆಯುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ನಡೆಸುತ್ತಿರುವ ಬಿ.ಎ. ಸಂಸ್ಕೃತ/ವೇದ ವಿದ್ವನ್ಮಧ್ಯಮಾ ಮತ್ತು ಎಂ.ಎ. ಸಂಸ್ಕೃತ/ ವೇದ ವಿದ್ವದುತ್ತಮಾ ಪರೀಕ್ಷೆಗಳನ್ನು ಈ ಹಿಂದೆ ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯು 12 ಶಾಸ್ತ್ರ ಭಾಗಗಳು (combination) ಹಾಗೂ 4 ವೇದ ಭಾಗಗಳಲ್ಲಿ ಪರೀಕ್ಷೆಯನ್ನು ನಡೆಸುತ್ತಿತ್ತು.

1. **ವಿದ್ವನ್ಮಧ್ಯಮಾ:** ಈ ಪದವಿಯು ಮೂರು ವರ್ಷಗಳ ವ್ಯಾಸಂಗಾವಧಿ (ಕೋರ್ಸ್ ಆಫ್ ಸ್ಟಡಿ) ಉಳ್ಳದ್ದಾಗಿದ್ದು ಕಾಲೇಜು (Regular) ಅಭ್ಯರ್ಥಿಗಳಿಗೆ ಪ್ರಥಮ ಹಾಗೂ ದ್ವಿತೀಯ ವರ್ಷಗಳ ಪರೀಕ್ಷೆಗಳನ್ನು ಕಾಲೇಜು ಹಂತದಲ್ಲಿಯೇ ನಡೆಸಲಾಗುತ್ತಿತ್ತು. ಅಂತಿಮ ವರ್ಷದ ಪರೀಕ್ಷೆಯನ್ನು ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯು ನಡೆಸುತ್ತಿತ್ತು. ಈ ಪರೀಕ್ಷೆಗೆ ಖಾಸಗಿ ಅಭ್ಯರ್ಥಿಗಳು ಸಾಹಿತ್ಯ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು, ವಿದ್ವನ್ಮಧ್ಯಮಾ ಅಂತಿಮ ವರ್ಷದ ಪರೀಕ್ಷೆಗೆ ನೇರವಾಗಿ ನೋಂದಣಿ ಮಾಡಿಸಿಕೊಳ್ಳಲು ಅವಕಾಶವಿತ್ತು.

2. **ವಿದ್ವದುತ್ತಮಾ:** ಈ ಪದವಿಯು ಎರಡು ವರ್ಷಗಳ ವ್ಯಾಸಂಗಾವಧಿಯುಳ್ಳದಾಗಿದ್ದು (ಕೋರ್ಸ್ ಆಫ್ ಸ್ಟಡಿ) ಕಾಲೇಜು (Regular) ಅಭ್ಯರ್ಥಿಗಳಿಗೆ ಪ್ರಥಮ ವರ್ಷದ ಪರೀಕ್ಷೆಯನ್ನು ಕಾಲೇಜು ಹಂತದಲ್ಲಿಯೇ ನಡೆಸಲಾಗುತ್ತಿತ್ತು. ಅಂತಿಮ ವರ್ಷದ ಪರೀಕ್ಷೆಯನ್ನು ಪ್ರೌಢಶಿಕ್ಷಣ ಪರೀಕ್ಷಾಮಂಡಳಿಯು ನಡೆಸುತ್ತಿತ್ತು. ಖಾಸಗಿ ಅಭ್ಯರ್ಥಿಗಳು ವಿದ್ವನ್ಮಧ್ಯಮಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು ನೇರವಾಗಿ ಅಂತಿಮ ವರ್ಷದ ಪರೀಕ್ಷೆ ಬರೆಯಲು ಅವಕಾಶವಿದ್ದಿತು. ವಿದ್ವನ್ಮಧ್ಯಮಾ ಒಂದು ಶಾಸ್ತ್ರದಲ್ಲಿ ಉತ್ತೀರ್ಣರಾದವರು ಮತ್ತೊಂದು ಶಾಸ್ತ್ರದ ಅಂತಿಮ ಪರೀಕ್ಷೆಗೆ ನೇರವಾಗಿ ಕೂರಲು ಅವಕಾಶವಿದ್ದು, ಸಾಮಾನ್ಯ ಪತ್ರಿಕೆಗಳಿಗೆ ವಿನಾಯಿತಿ ನೀಡಲಾಗಿತ್ತು. ವಿದ್ವನ್ಮಧ್ಯಮಾ ಮತ್ತು ವಿದ್ವದುತ್ತಮಾ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಕಾಲೇಜು ಹಾಗೂ ಖಾಸಗಿ ಅಭ್ಯರ್ಥಿಗಳು ಯಾವಾಗಲಾದರು ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿತ್ತು. ಆದರೆ ವಿಶ್ವವಿದ್ಯಾಲಯದ ನಿಯಮದಂತೆ ಪರೀಕ್ಷಾ ಮಂಡಳಿಯಲ್ಲಿ ನಿರಸ್ತ (Discontinue) ನಿರ್ಬಂಧವಿರಲಿಲ್ಲ.

ಹಾಗಾಗಿ ವಿದ್ಯಾರ್ಥಿಗಳು ತಮಗೆ ಅನುಕೂಲವಾದಾಗ ಪರೀಕ್ಷೆ ತೆಗೆದುಕೊಳ್ಳುತ್ತಿದ್ದರು. ಈಗ ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಕೋರ್ಸನ್ನು ಪೂರ್ಣಗೊಳಿಸಲು ವ್ಯಾಸಂಗ ಅವಧಿಯ ಎರಡರಷ್ಟನ್ನು ನಿಗದಿಗೊಳಿಸಿರುವ ಹಿನ್ನೆಲೆಯಲ್ಲಿ ಈಗ ಅರ್ಜಿ ಸಲ್ಲಿಸಿರುವ ಬಿ.ಎ. ಸಂಸ್ಕೃತ/ವೇದ ವಿದ್ವನ್ಮಧ್ಯಮಾ ಹಾಗೂ ಎಂ.ಎ. ಸಂಸ್ಕೃತ/ವೇದ ವಿದ್ವದುತ್ತಮಾ ಅಭ್ಯರ್ಥಿಗಳಿಗೆ ಅವಕಾಶವಿರುವುದಿಲ್ಲ, ಆದರೆ ಅದೇ ವಿಶ್ವವಿದ್ಯಾಲಯಗಳು ಪ್ರಶಿಕ್ಷಣ ಪ್ರರಿಷತ್ತಿನ ಒಪ್ಪಿಗೆ ಪಡೆದು ಎಲ್ಲರೂ ಪರೀಕ್ಷೆಗೆ ಕೂರುವ ಅವಕಾಶ ಕಲ್ಪಿಸಿರುವ ಹಿನ್ನೆಲೆಯಲ್ಲಿ ಈಗ ಅರ್ಜಿ ಸಲ್ಲಿಸಿರುವ 94+48 ವಿದ್ಯಾರ್ಥಿಗಳು ಮತ್ತು ಇನ್ನೂ ಮುಂದೆ ಪರೀಕ್ಷೆ ತೆಗೆದುಕೊಳ್ಳುವವರಿಗೆ 2012–13ನೇ ಸಾಲಿಗೆ ಅನುಮತಿ ನೀಡಬೇಕಿರುತ್ತದೆ.

**ಅವಧಿ ಮೀರಿರುವ ಅರ್ಜಿಗಳ ವಿವರ:**

ಬಿ.ಎ. ಸಂಸ್ಕೃತ/ವೇದ ವಿದ್ವನ್ಮಧ್ಯಮಾ ಅರ್ಜಿಗಳ ಸಂಖ್ಯೆ: 94 (2000–2001ರಿಂದ ಡಿಸ್ಕಂಟಿನ್ಯೂ/ಮಧ್ಯನಿರಸ್ತ)

ಎಂ.ಎ. ಸಂಸ್ಕೃತ/ವೇದ ವಿದ್ವದುತ್ತಮಾ ಅರ್ಜಿಗಳ ಸಂಖ್ಯೆ: 48 (2004–2005ರಿಂದ ಡಿಸ್ಕಂಟಿನ್ಯೂ/ಮಧ್ಯನಿರಸ್ತ)

ನಿರ್ಣಯ: **ಈ ಅಂಶವನ್ನು ಸಭೆಯು ವಿವರವಾಗಿ ಪರಿಶೀಲಿಸಿತು. ವಿದ್ವನ್ಮಧ್ಯಮಾ ಮೂರನೇ ವರ್ಷ ಹಾಗೂ ವಿದ್ವದುತ್ತಮಾ ಎರಡನೆಯ ವರ್ಷದ ಪರೀಕ್ಷೆಗಳಲ್ಲಿ ಅನುತ್ತೀರ್ಣರಾಗಿರುವವರು ೨೦೧೧–೧೨ನೇ ಸಾಲಿನಲ್ಲಿ ಪರೀಕ್ಷೆಗಳನ್ನು ತೆಗೆದುಕೊಳ್ಳಬಹುದೆಂದೂ ಇವರಿಗೆ ೨೦೧೩–೧೪ನೇ ವರ್ಷ ಅಂತಿಮ ಗಡುವು ಆಗಿದ್ದು ಅಷ್ಟರಲ್ಲಿ ಉತ್ತೀರ್ಣರಾಗಬಹುದೆಂದು, ಇಲ್ಲದಿದ್ದರೆ ಪ್ರಥಮ ವರ್ಷದಿಂದಲೇ ಪರೀಕ್ಷೆಗಳಿಗೆ ತೆಗೆದುಕೊಳ್ಳಬೇಕಾಗುತ್ತದೆಂದು ಸಭೆಯು ಸೂಚಿಸಿ ಅನುಮೋದಿಸಿತು.**

### ವಿಷಯ 2: ವಿದ್ಯಾಧೀಶ ಸ್ನಾತಕೋತ್ತರ ಸಂಸ್ಕೃತ ಶೋಧಕೇಂದ್ರಕ್ಕೆ ಘಟನೋತ್ತರ ಅನುಮೋದನೆ ನೀಡಿರುವ ಬಗೆಗೆ.

ಟಿಪ್ಪಣಿ: ದ್ವೈತವೇದಾಂತ ಅಧ್ಯಯನ ಮತ್ತು ಸಂಶೋಧನಾ ಪ್ರತಿಷ್ಠಾನ, ಉತ್ತರಾದಿಮಠ ರಸ್ತೆ, ಬಸವನಗುಡಿ, ಬೆಂಗಳೂರು –ಈ ಸಂಸ್ಥೆಯು ಕರ್ನಾಟಕ ಸರ್ಕಾರದ ಉನ್ನತಶಿಕ್ಷಣದ ವಲಯದಡಿಯಲ್ಲಿ ಬರುವ ರಾಜ್ಯವಲಯ ಯೋಜನೆಯ ಅಧೀನದಲ್ಲಿ ಸಹಾಯಧನವನ್ನು ಪಡೆದು ಸಂಸ್ಕೃತಾಧ್ಯಯನದ ಒಂದು ಸಂಸ್ಥೆಯಾಗಿದ್ದು, ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆಯನ್ನು ಪಡೆದಿರುತ್ತದೆ. ಈ ಪ್ರತಿಷ್ಠಾನವು –ಇವರ ಅರ್ಜಿ ಸಂಖ್ಯೆ: ಡಿವಿಎಫ್/9/2011–12, ದಿನಾಂಕ: 15.09.2011ರಲ್ಲಿ **ವಿದ್ಯಾಧೀಶ ಸ್ನಾತಕೋತ್ತರ ಸಂಸ್ಕೃತ ಶೋಧಕೇಂದ್ರಕ್ಕೆ** ಮಾನ್ಯತೆ ನೀಡುವಂತೆ ಕೋರಿದ್ದು, ಅದಕ್ಕೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಸಂಶೋಧನಾ ಕೇಂದ್ರ ಮಾನ್ಯತಾ ಪರಿಶೀಲನೆಗೆ ಸಮಿತಿಯನ್ನು ನೇಮಿಸಿದ್ದು, ಸಮಿತಿಯು ಸ್ಥಳಕ್ಕೆ ಭೇಟಿ ನೀಡಿ ಖುದ್ದಾಗಿ ಪರಿಶೀಲಿಸಿ ತಪಾಸಣಾ ವರದಿಯನ್ನು ದಿನಾಂಕ: 10.02.2012ರಂದು ನೀಡಿರುತ್ತದೆ. ಈ ಸಂಸ್ಥೆಗೆ ಸಂಶೋಧನಾ ಕೇಂದ್ರವೆಂದು ಮಾನ್ಯತೆ ನೀಡಲು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ನಿಯಮಾನುಸಾರ ಒಪ್ಪಿ ಆದೇಶ ಸಂಖ್ಯೆ: ಕಸಂವಿ/ಸಂಕೇಮಾ/ವಿ.ಸ್ನಾ.ಸಂ.ಕೇಂ/2011–12; ದಿನಾಂಕ: 27.02.2012ರಂತೆ ಆದೇಶಿಸಿರುತ್ತದೆ.

ನಿರ್ಣಯ: **ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.**

### ವಿಷಯ 3: ಪಾಠಶಾಲೆಗಳ ಸಂಸ್ಕೃತ ಪೂರ್ವ ಪ್ರಾಥಮಿಕ ಶಿಕ್ಷಣ ಯೋಜನೆ

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮೊದಲನೇಯ ಪ್ರಶಾಸನ ಸಮಿತಿಯ ಸಭೆಯಲ್ಲಿ ನಡಾವಳಿ 19ರಂತೆ ಸಂಸ್ಕೃತ ಪೂರ್ವ ಪ್ರಾಥಮಿಕ ಶಿಕ್ಷಣ ಯೋಜನೆ 2012–13ರ ಉಪಸಮಿತಿಯನ್ನು ರಚಿಸಲಾಗಿತ್ತು. ಈ ಸಮಿತಿಯ ಸದಸ್ಯರು ದಿನಾಂಕ 6.2.2012ರಂದು ಸಭೆ ಸೇರಿ ನಿರ್ಣಯವನ್ನು ಸ್ವೀಕರಿಸಿರುತ್ತಾರೆ. ಅದರಂತೆ ರಾಜ್ಯದಲ್ಲಿರುವ 332 ಪಾಠಶಾಲೆಗಳಲ್ಲಿನ ಪ್ರಥಮಾ ದಿಂದ ವಿದ್ವದುತ್ತಮ ಪರೀಕ್ಷೆಯವರೆಗೆ 13 ವರ್ಷಗಳ ಶಿಕ್ಷಣ ನಡೆಯುತ್ತಿದ್ದು, ಇದಕ್ಕೆ ಪೂರಕವಾಗಿ ಪೂರ್ವ ಪ್ರಾಥಮಿಕ ಶಿಕ್ಷಣವನ್ನು ಆರಂಭಿಸುವುದು. ಇದಕ್ಕೆ ಸಂಬಂಧಿಸಿದ ಪಠ್ಯಕ್ರಮವನ್ನು ರೂಪಿಸುವುದು. ಆ ನಿಮಿತ್ತ ಪಠ್ಯಪುಸ್ತಕ ರಚನಾ ಸಮಿತಿಯನ್ನು ರಚಿಸುವುದು, ಇದಕ್ಕೆ ಸಂಬಂಧಿಸಿದ ಹಣಕಾಸು ನೆರವಿಗೆ ಸರ್ಕಾರಕ್ಕೆ ಪ್ರಸ್ತಾವೆಯನ್ನು ಸಲ್ಲಿಸಿ, ಅನುದಾನ ಲಭ್ಯವಾದ ಬಳಿಕ ಮಾಧ್ಯಮ ಸಂಸ್ಥೆಯ ಮೂಲಕ 2012–13ರಲ್ಲಿ ಈ ಯೋಜನೆಯನ್ನು ಕೈಗೆತ್ತಿಕೊಳ್ಳುವುದು ಹಾಗೂ ಈಗಿರುವ ಪಾಠಶಾಲೆಗಳಲ್ಲಿ ಈ ಕಾರ್ಯವನ್ನು ಪ್ರಾಯೋಗಿಕವಾಗಿ ಕೈಗೊಳ್ಳಲು ತೀರ್ಮಾನಿಸಲಾಯಿತು.

ನಿರ್ಣಯ: **ಸಭೆಯು ಈ ಅಂಶವನ್ನು ಪರಿಶೀಲಿಸಿ, ೨೦೧೨–೧೩ರ ಸಾಲಿನ ಆಯವ್ಯಯದಲ್ಲಿ ಸೇರಿಸಬೇಕೆಂದೂ ತಗುಲುವ ಒಟ್ಟು ಮೊತ್ತದ ಅಂದಾಜನ್ನು ಪರಿಶೀಲಿಸಿ ಸೂಕ್ತ ಪ್ರಸ್ತಾವನೆಯೊಡನೆ ಸರ್ಕಾರಕ್ಕೆ ಸಲ್ಲಿಸಬಹುದೆಂದೂ ಸೂಚಿಸಿ ಅನುಮೋದನೆ ನೀಡಿತು.**

### ವಿಷಯ 4: ಸಂಸ್ಕೃತ ಪಾಠಶಾಲಾ ಶೈಕ್ಷಣಿಕ ಸಲಹಾ ಸಮಿತಿಯ ನಡಾವಳಿ.

ಟಿಪ್ಪಣಿ: ಈ ಸಮಿತಿಯನ್ನು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಮೊದಲನೇಯ ಪ್ರಶಾಸನ ಸಮಿತಿಯ ನಡಾವಳಿ ಸಂಖ್ಯೆ 27ರಂತೆ ರಚಿಸಲಾಗಿದ್ದು, ಸಮಿತಿಯು ದಿನಾಂಕ 10.2.2012ರಂದು ಸಭೆ ಸೇರಿ 332 ಪಾಠಶಾಲೆಗಳ ಸಮಯವನ್ನು ಅಗತ್ಯಕ್ಕೆ ತಕ್ಕಂತೆ ಸೂಕ್ತವಾಗಿ ನಿಗದಿಪಡಿಸಲಾಯಿತು. ಪಠ್ಯಪುಸ್ತಕಗಳನ್ನು ಉಚಿತವಾಗಿ ವಿತರಿಸುವುದು, ವಿದ್ಯಾರ್ಥಿವೇತನವನ್ನು ನೀಡುವುದು, ಪಾಠಶಾಲಾ ಶಿಕ್ಷಕರುಗಳಿಗೆ ವಿಶೇಷ ತರಬೇತಿ ನೀಡುವುದು, ಪಠ್ಯೇತರ ಚಟುವಟಿಕೆಗಳಿಗೆ ಅನುದಾನ ನೀಡುವುದು, ನೂತನವಾಗಿ ಸಂಸ್ಕೃತ ಮತ್ತು ವೇದ ಶಾಲೆಗಳನ್ನು ಆರಂಭಿಸಲು ಅನುಮತಿ ನೀಡುವುದು, ಪಾಠಶಾಲಾ ಪಠ್ಯಪುಸ್ತಕಗಳ ಪರಿಷ್ಕರಣೆಯನ್ನು ನಡೆಸುವುದು ಹಾಗೂ ಖಾಸಗಿಯಾಗಿ ಬಾಹ್ಯ ವಿದ್ಯಾರ್ಥಿಗಳು ಪರೀಕ್ಷೆ ತೆಗೆದುಕೊಳ್ಳುವ ಕುರಿತು ನಿರ್ಣಯಗಳನ್ನು ಕೈಗೊಳ್ಳಲಾಯಿತು.

ನಿರ್ಣಯ: **ಸಭೆಯು ಸಾರ್ವಜನಿಕ ಶಿಕ್ಷಣ ಇಲಾಖೆಯ ಮಾರಾಟ ವಿಭಾಗದಲ್ಲಿ ಉಳಿದಿರುವ ಪಠ್ಯಪುಸ್ತಕದ ವಿವರಗಳನ್ನು ತರಿಸಿಕೊಳ್ಳುವುದೆಂದೂ ವಿದ್ವನ್ಮಧ್ಯಮಾ ತೃತೀಯ ಹಾಗೂ ವಿದ್ವದುತ್ತಮಾ ಅಂತಿಮ ವರ್ಷದಲ್ಲಿರುವ ವಿದ್ಯಾರ್ಥಿಗಳಿಗೆ ಈಗ ಉಳಿದಿರುವ ೬ ಲಕ್ಷದ ವಿದ್ಯಾರ್ಥಿವೇತನದ**

**ಮೊತ್ತವನ್ನು ಪಾವತಿಸಬಹುದೆಂದೂ ಸೂಚಿಸಿ ಅನುಮೋದಿಸಿತು. ಈ ವಿಷಯದಲ್ಲಿ ಮಾನ್ಯ ಕುಲಪತಿಗಳು ಸೂಕ್ತ ರೀತಿಯಿಂದ ನಿರ್ಣಯ ತೆಗೆದುಕೊಳ್ಳಬಹುದೆಂದು ಸಭೆ ಒಪ್ಪಿಗೆ ನೀಡಿತು.**

**ವಿಷಯ 5: ಘಟಕ ಕಾಲೇಜುಗಳ ಪರಿನಿಯಮದ ಅನುಮೋದನೆಯನ್ನು ಕುರಿತು.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಅಸ್ತಿತ್ವಕ್ಕೆ ಬಂದ ನಂತರದಲ್ಲಿ, ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಆದೇಶ ಸಂಖ್ಯೆ ಇಡಿ 173 ಯುಆರ್‌ಸಿ 2010, ದಿನಾಂಕ 1.4.2011 ರಲ್ಲಿ ಸರ್ಕಾರಿ ಸಂಸ್ಕೃತ ಕಾಲೇಜುಗಳಾದ ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಬೆಂಗಳೂರು ಹಾಗೂ ಶ್ರೀಮನ್‌ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು ಇವುಗಳನ್ನು ವಿಶ್ವವಿದ್ಯಾಲಯದ ಘಟಕ ಕಾಲೇಜುಗಳನ್ನಾಗಿ ಘೋಷಿಸಲಾಗಿದ್ದು, ಇವುಗಳ ವಿಲೀನಿಕರಣಕ್ಕೆ ಸಂಬಂಧಿಸಿದಂತೆ ಘಟಕ ಕಾಲೇಜುಗಳ ಪರಿನಿಯಮವನ್ನು ರಚಿಸಲಾಗಿದೆ. ಇದು ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಯನ್ನು ಪಡೆಯಬೇಕಿದೆ.

ನಿರ್ಣಯ: **ಸಭೆಯು ಘಟಕ ಕಾಲೇಜುಗಳ ಪರಿನಿಯಮಕ್ಕೆ ಒಪ್ಪಿಗೆ ನೀಡಿತು ಮತ್ತು ಆದಷ್ಟು ಬೇಗ ಸರ್ಕಾರಕ್ಕೆ ಪರಿನಿಯಮವನ್ನು ಕಳುಹಿಸಲು ಅನುಮೋದಿಸಿತು.**

**ವಿಷಯ 6: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಘಟಕ ಕಾಲೇಜುಗಳ ಚರ ಸ್ಥಿರಾಸ್ತಿಗಳನ್ನು ವಹಿಸಿಕೊಡುವ ಕುರಿತು.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಆದೇಶ ಸಂಖ್ಯೆ ಇಡಿ 173 ಯುಆರ್‌ಸಿ 2010, ದಿನಾಂಕ 1.4.2011 ರಲ್ಲಿ ಸರ್ಕಾರಿ ಸಂಸ್ಕೃತ ಕಾಲೇಜುಗಳಾದ ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಬೆಂಗಳೂರು ಹಾಗೂ ಶ್ರೀಮನ್‌ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು ಇವುಗಳನ್ನು ವಿಶ್ವವಿದ್ಯಾಲಯದ ಘಟಕ ಕಾಲೇಜುಗಳನ್ನಾಗಿ ಘೋಷಿಸಲಾಗಿದ್ದು, ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಆದೇಶ ಸಂಖ್ಯೆ ಇಡಿ 87 ಯುಪಿಸಿ 2010, ದಿನಾಂಕ 15.10.2010ರಲ್ಲಿ ಮೇಲ್ಕಂಡ ಸಂಸ್ಕೃತ ಕಾಲೇಜುಗಳಲ್ಲಿ ಕರ್ತವ್ಯನಿರ್ವಹಿಸುತ್ತಿರುವ ಎಲ್ಲಾ ಬೋಧಕ ಬೋಧಕೇತರ ಸಿಬ್ಬಂದಿಗಳನ್ನು ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡಿಸಲಾಗಿದೆ. ಇದೀಗ ಉನ್ನತ ಶಿಕ್ಷಣ ಇಲಾಖೆಗೆ ಸಂಬಂಧಿಸಿದ ಸರ್ಕಾರದ ನಡಾವಳಿ ಸಂಖ್ಯೆ ಇಡಿ 358 ಯುಆರ್‌ಸಿ 011, ಬೆಂಗಳೂರು, ದಿನಾಂಕ 27.2.2012ರಲ್ಲಿ ಘಟಕ ಕಾಲೇಜುಗಳ ಸಂಪೂರ್ಣ ಸ್ತಿರಾಸ್ಥಿ, ಚರಾಸ್ಥಿಗಳನ್ನು ವರ್ಗಾಯಿಸಿರುತ್ತಾರೆ.

ನಿರ್ಣಯ: **ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜು ಮತ್ತು ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜುಗಳ ಚರ–ಸ್ಥಿರಾಸ್ತಿಗಳನ್ನು ವಿಶ್ವವಿದ್ಯಾಲಯಕ್ಕೆ ಕರ್ನಾಟಕ ಸರ್ಕಾರದ ನಡಾವಳಿ ಮೂಲಕ ದಿನಾಂಕ: ೨೭.೦೨.೨೦೧೨ರಂದು ಆದೇಶ ಹೊರಡಿಸಿರುವುದಕ್ಕೆ ಸಭೆಯು ಸಂತೋಷ ಸೂಚಿಸಿತು. ಆದಷ್ಟು ಬೇಗ ವಿಶ್ವವಿದ್ಯಾಲಯದ ಹೆಸರಿಗೆ ಖಾತಾ ಪರಿವರ್ತನೆ ಮಾಡಿಕೊಳ್ಳುವ ಪ್ರಕ್ರಿಯೆ ಬೇಗನೆ ಆಗಬೇಕೆಂದು ಸೂಚಿಸಿ ಅನುಮೋದಿಸಿತು.**

**ಪ್ರೊ. ವೈ.ಎಸ್. ಸಿದ್ದೇಗೌಡ**
ಸದಸ್ಯ ಕಾರ್ಯದರ್ಶಿ

**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**
ಅಧ್ಯಕ್ಷರು